ಬೆಂಗಳೂರ್ ಸಿಟಿ ಮ್ಯುನಿಸಿಪಲ್ ಬೋರ್ಡಿನಿಂದ.

ಇ ಸ್ತ್ ಹಾ ರ್ ನಾ ಮೆ .

ತಾರೀಖು 15ನೇ ಆಗಸ್ಟ್ 1896.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ, ನಾರದರ್ಟ್ ಯಕ್ಸ್ಟರ್ಟ್ಷನಲ್ಲಿ ಮನೆ ನಿವೇಶನಗಳ ಪೈಕಿ ಖಾಲಿ ಇರುವ ಈ ಕೆಳಗೆ ನಮೂದಿಸಿ ಇರುವ ನಂಬರುಗಳುಳ್ಳ 8 ನಿವೇಶನಗಳನ್ನು ಈ ಮಾಹೆ 28ನೇ ತಾರೀಖು ಪ್ರಾತಃಕಾಲ 7½ ಘಂಟೆಗೆ ಡಿಟೋ ಜಾಗಾದ ಬಳಿಯಲ್ಲೇ ಹರಾಜ್ ಮಾಡಿಸಲ್ಪಡುತ್ತೆಯಾಗಿ ಇಷ್ಟವುಳ್ಳವರು ಹಾಜರಿದ್ದು ಸವಾಲ್‌ಮಾಡಿ ಪಡದುಕೊಳ್ಳಬಹುದು.

2. ಸವಾಲ್ ಖೈದಾದ ಕೂಡ್ಲೆ ಛಡಸವಾಲ್‌ದಾರ್ರು ಸವಾಲ್ ಮೊಬಲಗಿನ ನಾಲ್ಕರಲ್ಲಿ ಬಂದು ಹಿಸ್ಸೆಯನ್ನು ಕೂಡ್ಲೆ ಡಿಪಾಜಿಟ್ಟು ಗಿ ಹಾಜರ್ಮಾಡಿ ಮಂಜೂರಿ ಆರಡರ್ ಕೊಟ್ಟ 7 ದಿವಸದೊಳಗಾಗಿ ಬಾಕಿ ಮೊಬಲಗು ಪೂರಾ ಪಾವತಿ ಮಾಡಿ ರಸೀತಿ ಪಡದು ಜಮ್ಮಾ ಸುಫರ್ದು ಮಾಡಿಕೊಳ್ಳಬೇಕು.

3. ಹಾಗೆ ಸುಫರ್ದು ಮಾಡಿಕೊಂಡ 2 ತಿಂಗಳೊಳಗಾಗಿ ಅವಶ್ಯಕವಾದ ಸಾಮಾನುಗಳನ್ನ ವದಗಿಸಿಕೊಂಡು ಪ್ಯಾರ್ಟ್ ಹಾಜರ್ಮಾಡಿ ಲೈಸೆನ್ಸ್ ಪಡದು 12 ತಿಂಗಳೊಳಗಾಗಿ ಕಟ್ಟಡವನ್ನ ಪೂರೈಸಿಕೊಳ್ಳಬೇಕು. ಇದಕ್ಕೆ ತಪ್ಪಿದಲ್ಲಿ ಲುಕ್ಸಾನಿಗೆ ಯಾವ ಈಡು ಇಲ್ಲದೆ ಸೈಟ್ ಸರ್ಕಾರಕ್ಕೆ ಕೇರಿಸಿಕ್ಕೊಂಡು ಹರಾಜ್ ಮಾಡಿಸಲ್ಪಡುತ್ತೆ.

4. ಸವಾಲ್ ಖೈದಾದ ಕೂಡ್ಲೆ ಡಿಪಾಜಿಟ್ ಹಾಜರ್ಮಾಡದೆಯಾಗಲೀ ಅಥವಾ ಮಂಜೂರಿ ಆರ್ಡರ್ ಪಡದ 7 ದಿವಸದೊಳಗಾಗಿ ಪೂರಾ ಮೊಬಲಗು ಪಾವತಿ ಮಾಡದೆಯಾಗಲೀ ತಪ್ಪಿದಲ್ಲಿ ಲುಕ್ಸಾನಿಗೆ ಛಡಸವಾಲ್‌ದಾರನ ಜವಾಬ್‌ದಾರಿ ಮೇಲೆ ಸೈಟ್ ಪುನಹಾ ಹರಾಜ್ ಮಾಡಿಸಲ್ಪಡುತ್ತೆ. ಈ ಹರಾಜಿನಲ್ಲಿ ನಫೆಬಂದರೆ ಬೋರ್ಡಿಗೆ ಸೇರಿದ್ದಾಗಿರುತ್ತೆ.

5. ಯಾವ ಕಾರಣವನ್ನು ತಿಳಿಸದೆ ಯಾವ ಸವಾಲನ್ನಾಗಲೀ ಅಂಗೀಕರಿಸುವ ಮತ್ತು ನಿರಾಕರಿಸುವ ಬಾಧ್ಯತೆಯನ್ನು ಈ ಕೆಳಗೆ ಸೈನ್ ಮಾಡಿ ಇರುವರು ವೈಸಿಕೊಂಡು ಇರುತ್ತಾರೆ.

ಸೈಟ್ ನಂಬರ್.	..	ಸೈಟ್ ನಂಬರ್.
30	..	59
43	..	99
57	..	102
58	..	103

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ,—ಸಿಟಿ ಮಜಕೂರು Iನೇ ಪ್ಯಾಲೇಸ್ ಡಿವಿಜ್ಞನಿಗೆ ಕೇರಿದ ಹೊಸ ಗುಟ್ಟಹಳ್ಳಿ ಏರಿಯಲ್ಲಿ ಮನೆಗಳಿಗಾಗಿ ವಿಂಗಡಿಸಿರುವ ನಿವೇಶನಗಳ ಪೈಕಿ ಈ ಕೆಳಗೆ ನಮೂದಿಸುವ 30 ನಿವೇಶನಗಳನ್ನು ಅವುಗಳ ಮಾರ್ಜನ್ನಲ್ಲಿ ನಮೂದಾದ ತಾರೀಖುಗಳಲ್ಲಿ ಪ್ರಾತಃಕಾಲ 7½ ಘಂಟೆಯಿಂದ ಡಿಟೋ ಜಾಗಾದಬಳಿಯಲ್ಲೇ ಹರಾಜು ಮಾಡಿಸಲ್ಪಡುತ್ತೆಯಾಗಿ ಇಷ್ಟವುಳ್ಳವರು ಹಾಜರಿದ್ದು ಸವಾಲ್‌ಮಾಡಿ ಪಡದುಕೊಳ್ಳಬಹುದು.

2. ಛಡಸವಾಲ್‌ದಾರ್ರು ಸವಾಲ್ ಖೈದಾದ ಕೂಡಿ ಸವಾಲ್ ಮೊಬಲಗಿನ ನಾಲ್ಕರಲ್ಲಿ ಬಂದು ಹಿಸ್ಸೆ ಮೊಬಲಗನ್ನು ಹಾಜರ್ಮಾಡಿ ಮಂಜೂರಿ ಆರ್ಡರ್ ಕೊಟ್ಟ ಏಳು ದಿವಸದೊಳಗಾಗಿ ಬಾಕಿ ಮೊಬಲಗು ಪೂರಾ ಪಾವತಿಮಾಡಿ ರಸೀತಿ ಪಡದು ಜಮ್ಮಾ ಸುಫರ್ದು ಮಾಡಿಕೊಳ್ಳಬೇಕು.

3. ಹಾಗೆ ಸುಫರ್ದು ಮಾಡಿಕೊಂಡ ತಾರೀಖು ಲಾಗಾಯತು ಎರಡು ತಿಂಗಳವಳಗಾಗಿ ಅವಶ್ಯಕವಾದ ಸಾಮಾನುಗಳನ್ನ ವದಗಿಸಿ ಕೊಂಡು, ಪ್ಯಾರ್ಟ್ ಹಾಜರುಮಾಡಿ ಲೈಸೆನ್ಸ್ ಪಡದು ಹನ್ನೆರಡು ತಿಂಗಳೊಳಗಾಗಿ ಕಟ್ಟಡವನ್ನ ಪೂರೈಸಿಕೊಳ್ಳಬೇಕು. ತಪ್ಪಿದಲ್ಲಿ ಲುಕ್ಸಾನಿಗೆ ಯಾವ ಈಡು ಯಿಲ್ಲದೆ ನಿವೇಶನವನ್ನ ಸರ್ಕಾರಕ್ಕೆ ಸೇರಿಸಿಕೊಂಡು ಹರಾಜು ಮಾಡಿಸಲ್ಪಡುವದು.

4. ಸವಾಲ್ ಖೈದಾದ ಕೂಡ್ಲೆ ಡಿಪಾಜಿಟ್ ಹಾಜರ್ಮಾಡದೆಯಾಗಲಿ ಅಥವಾ ಮಂಜೂರಿ ಆರ್ಡರ್ ಪಡದ ಏಳು ದಿವಸದೊಳಗಾಗಿ ಬಾಕಿ ಮೊಬಲಗು ಪೂರಾ ಪಾವತಿ ಮಾಡದೆಯಾಗಲಿ ತಪ್ಪಿದಲ್ಲಿ ಲುಕ್ಸಾನಿಗೆ ಛಡಸವಾಲ್‌ದಾರನ ಜವಾಬ್‌ದಾರೀ ಮೇಲೆ ಸೈಟ್ ಪುನಹ ಹರಾಜು ಮಾಡಿಸಲ್ಪಡುವದು. ಈ ಹರಾಜಿನಲ್ಲಿ ನಫೆ ಬಂದರೆ ಬೋರ್ಡಿಗೆ ಸೇರಿದ್ದಾಗಿರುತ್ತೆ.

5. ಯಾವ ಕಾರಣವನ್ನೂ ತಿಳಿಸದೆ ಯಾವ ಸವಾಲನ್ನಾಗಲಿ ಅಂಗೀಕರಿಸುವ ಮತ್ತು ನಿರಾಕರಿಸುವ ಬಾಧ್ಯತೆಯನ್ನು ಈ ಕೆಳಗೆ ಸೈನ್ ಮಾಡಿರುವರು ವೈಸಿಕೊಂಡಿರುತ್ತಾರೆ:—

ಸೈಟ್ ನಂಬರು.	ಹರಾಜು ತಾರೀಖು.	ಸೈಟ್ ನಂಬರು.	ಹರಾಜು ತಾರೀಖು.	ಸೈಟ್ ನಂಬರು.	ಹರಾಜು ತಾರೀಖು.
15	1896ನೇ ಇಸವಿ ಸೆಪ್ಟೆಂಬರು ತಾರೀಖು 14ನೇ ಪ್ರಾತಃಕಾಲ 7½ ಘಂಟೆ ಲಾಗಾಯತು.	25	ಡಿಟೋ ಮಾಹೆ 16ನೇ ತಾರೀಖು ಪ್ರಾತಃಕಾಲ 7½ ಘಂಟೆ ಲಾಗಾಯತು.	35	ಡಿಟೋ ಮಾಹೆ 18ನೇ ತಾರೀಖು ಪ್ರಾತಃಕಾಲ 7½ ಘಂಟೆ ಲಾಗಾಯತು.
16		26		36	
17		27		37	
18		28		38	
19		29		39	
20		30		40	
21		31		41	
22		32		42	
23		33		43	
24		34		44	

ಟಿ. ಟಿ. ಲೆನಾರ್ಡ್,
ಪ್ರಸಿಡೆಂಟ್.

Mysore Govt. Central Press, Bangalore.—1896.